ನೀಡಿದ ಸೂಚನೆ ಪತ್ರಕ್ಕೆ ಮುಂದಿನ ಆದೇಶದವರೆಗೆ ತಡೆ ನೀಡಿದೆ. ಸದರಿ ಆದೇಶವನ್ನು ಜಾರಿಗೊಳಿಸಲು ಅಗತ್ಯ ಕ್ರಮ ಕೈಗೊಂಡು ವಿವರವಾದ ವರದಿಯನ್ನು ಸಲ್ಲಿಸಲು ದಿನಾಂಕ: 17/03/2009ರಲ್ಲಿ ಮಂಗಳೂರು ಸಮಿತಿಯ ಕಾರ್ಯದರ್ಶಿಗೆ ಕೃಷಿ ಮಾರಾಟ ನಿರ್ದೇಶನಾಲಯದಿಂದ ಸೂಚನೆ ನೀಡಲಾಗಿದೆ. ನಂತರದಲ್ಲಿ ಮಾರುಕಟ್ಟೆ ಸಮಿತಿಯು 77 ವರ್ತಕರ ವಿರುದ್ಧ ದಿನಾಂಕ: 23/03/2009 ರಲ್ಲಿ ಸ್ಥಳೀಯ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತದೆ.

ಇ) ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 14024/2008 ವಿಚಾರಣೆಯಲ್ಲಿದ್ದು, ತೀರ್ಪು ಬಂದ ನಂತರ ಸೂಕ್ತ ಕ್ರಮ ಜರುಗಿಸಲಾಗುವುದು.

ಹಿಂಡಲಗಾ ಜೈಲು ಸಿಬ್ಬಂದಿಗಳ ಸೌಲಭ್ಯ

196(303) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್:(ಜಮಖಂಡಿ) ಮಾನ್ಯ ತೋಟಗಾರಿಕೆ ಹಾಗೂ ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂನ ಹಿಂಡಲಗಾ ಜೈಲಿನಲ್ಲಿರುವ ಸಿಬ್ಬಂದಿ ಎಷ್ಟು?

ಆ) ಎಷ್ಟು ಸಿಬ್ಬಂದಿಗಳಿಗೆ ಸರ್ಕಾರದಿಂದ ವಸತಿ ವ್ಯವಸ್ಥೆ ಮಾಡಲಾಗಿದೆ?

ಇ) ಸದ್ಯಕ್ಕೆ ಅಸ್ತಿತ್ವದಲ್ಲಿರುವ ಹಳೆಯ ಕಾಲದ ವಸತಿಗೃಹಗಳಿಗಿರುವ ಸೌಲಭ್ಯಗಳೇನು?

ಈ) ಈ ವಸತಿಗೃಹಗಳನ್ನು ಪುನರ್ ನಿರ್ಮಿಸಿ ಯೋಗ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಉಮೇಶ್ ವಿ ಕತ್ತಿ(ತೋಟಗಾರಿಕೆ ಹಾಗೂ ಬಂದೀಖಾನೆ ಸಚಿವರು):

ಅ) ಬೆಳಗಾವಿ ಹಿಂಡಲಗಾ ಜೈಲಿನಲ್ಲಿ ಹಾಲಿ 136 ಜನ ಅಧಿಕಾರಿ/ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.

ಆ) ಒಟ್ಟಾರೆ 114 ಅಧಿಕಾರಿ/ಸಿಬ್ಬಂದಿಗಳಿಗೆ ಇಲಾಖಾ ವತಿಯಿಂದ ವಸತಿಗೃಹ ವ್ಯವಸ್ಥೆ ಮಾಡಲಾಗಿದೆ. ಉಳಿದ ಸಿಬ್ಬಂದಿಗಳು ಸ್ವಂತವಾಗಿ ವಸತಿ ವ್ಯವಸ್ಥೆ ಮಾಡಿಕೊಂಡಿರುತ್ತಾರೆ.

ಇ) ಸದ್ಯಕ್ಕೆ ಅಸ್ತಿತ್ವದಲ್ಲಿರುವ ಹಳೆಯ ಕಾಲದ ವಸತಿಗೃಹಗಳ ಮೇಲ್ಛಾವಣಿ ಹಂಚಿನಿಂದ ಕೂಡಿದ್ದು, ಪ್ರತಿ ನಾಲ್ಕು ವಸತಿಗೃಹಗಳಿಗೆ ಒಂದರಂತೆ

ಶೌಚಾಲಯ ವ್ಯವಸ್ಥೆ ಮತ್ತು ನಾಲ್ಕು ವಸತಿಗೃಹಗಳಿಗೆ ಒಂದರಂತೆ ನೀರು ಸರಬರಾಜು ಕೊಳಾಯಿ ವ್ಯವಸ್ಥೆ ಕಲ್ಪಿಸಲಾಗಿದೆ. ವಿದ್ಯುತ್, ರಸ್ತೆ, ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ.

ಈ) ಕಾರಾಗೃಹಗಳ ಆಧುನೀಕರಣ 2ನೇ ಹಂತದ ಪರ್‌ಸ್ಪೆಕ್ಟಿವ್ ಯೋಜನೆ ಅಡಿಯಲ್ಲಿ 40 ಸಂಖ್ಯೆ ಹೊಸ ವಸತಿಗೃಹಗಳನ್ನು ಅಗತ್ಯ ಮೂಲಭೂತ ಸೌಕರ್ಯಗಳೊಂದಿಗೆ ನಿರ್ಮಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಡಿ ಸಿ ಸಿ ಬ್ಯಾಂಕ್ ಜ್ಯೂಬಿಲಿ ಆಚರಣೆ

197(304) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್:(ಜಮಖಂಡಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಡಿ.ಸಿ.ಸಿ. ಬ್ಯಾಂಕ್‌ನವರು ವಜ್ರಮಹೋತ್ಸವ ಕಾರ್ಯಕ್ರಮದ ಆಚರಣೆಗಾಗಿ 1993ರಲ್ಲಿ ಅಖಂಡ ಜಿಲ್ಲೆಯ ಸಹಕಾರ ಸಂಘಗಳಿಂದ (VSS) ಹಣ ಸಂಗ್ರಹಿಸಲಾಗಿದೆಯೇ? ಹಾಗಿದ್ದಲ್ಲಿ ಸಂಗ್ರಹಿಸಿದ ಹಣವೆಷ್ಟು?

ಆ) ಈ ಕಾರ್ಯಕ್ರಮ ನಡೆದಿಲ್ಲವಾದ್ದರಿಂದ ಸಂಗ್ರಹಿಸಿದ ಹಣವನ್ನು ಆಯಾ ಸಂಘಗಳಿಗೆ ಹಿಂದಿರುಗಿಸಲು ಸರ್ಕಾರ ಕ್ರಮಕೈಗೊಳ್ಳುವುದೇ?

ಶ್ರೀ ಲಕ್ಷ್ಮಣ ಸ ಸವದಿ(ಸಹಕಾರ ಸಚಿವರು):

ಅ) ಅವಿಭಜಿತ ಬಿಜಾಪುರ ಜಿಲ್ಲೆಯ ವ್ಯವಸಾಯ ಸೇವಾ ಸಹಕಾರ ಸಂಘಗಳಿಂದ ಹಾಗೂ ಇತರೆ ಸಹಕಾರ ಸಂಘ/ಸಂಸ್ಥೆಗಳಿಂದ ವಜ್ರ ಮಹೋತ್ಸವ ಸವಿನೆನಪಿನ ಸಂಚಿಕೆಗಾಗಿ ರೂ.51,82,000/– ವಂತಿಗೆ ಸಂಗ್ರಹಣ ಮಾಡಿರುತ್ತಾರೆ.

ಆ) ಈ ಕಾರ್ಯಕ್ರಮ ನಡೆದಿಲ್ಲವಾದ್ದರಿಂದ ಮತ್ತು ಬಿಜಾಪುರ ಜಿಲ್ಲೆ ವಿಭಜನೆಯಾಗಿ ಪ್ರತ್ಯೇಕ ಎರಡು ಬ್ಯಾಂಕುಗಳು ಅಗಿರುವುದರಿಂದ ಸಂಗ್ರಹಿಸಿದ ಹಣವನ್ನು ಆಯಾ ಸಂಘಗಳಿಗೆ ಹಿಂದಿರುಗಿಸಲು ಬ್ಯಾಂಕಿಗೆ ಸೂಚನೆ ನೀಡಲಾಗಿದೆ.

ಭದ್ರಾ ನದಿ ನೀರು ಕಲುಷಿತ

198(310) ಶ್ರೀ ಕುಮಾರಸ್ವಾಮಿ ಕೆ ಜಿ:(ಶಿವಮೊಗ್ಗ ಗ್ರಾಮಾಂತರ) ಮಾನ್ಯ ಬಂದರು, ಒಳನಾಡು ಜಲಸಾರಿಗೆ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?